# ವರ್ಗಕೋಣೆಯ ಸಂಘಟನೆ

# (CLASSROOM ORGANIZATION)

'ಜ್ಞಾನ ದೇವಾಲಯಗಳೆಂದೇ ಕರೆಸಿಕೊಳ್ಳುವ ಶಾಲೆ ಮತ್ತು ವರ್ಗಕೋಣೆಯ ಸಂಘಟನೆಯು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಮಹತ್ವವಾದ ಪಾತ್ರವನ್ನು ನಿರ್ವಹಿಸುತ್ತದೆ. ಶಾಲೆ ಮತ್ತು ವರ್ಗಕೋಣೆಯು ಸುವ್ಯವಸ್ಥಿತವಾಗಿ ಸಂಘಟಿಸಲ್ಪಟ್ಟಿದ್ದರೆ ಬೋಧನೆ ಮತ್ತು ಕಲಿಕ ಪ್ರಕ್ರಿಯೆಯು ಪರಿಣಾಮಕಾರಿಯಾಗಿ, ಅರ್ಥಪೂರ್ಣವಾಗಿ ಗುಣಾತ್ಮಕತೆಯಿಂದ ಕೂಡಿರುತ್ತದೆ'.

1964–66 ರ ಭಾರತೀಯ ಶೈಕ್ಷಣಿಕ ಆಯೋಗವು ತನ್ನ ಐತಿಹಾಸಿಕ ವರದಿಯನ್ನು ಈ ರೀತಿಯಾಗಿ ಪ್ರಾರಂಭಿಸಿದೆ. **"ಭಾರತದ ಭವಿಷ್ಯವು ಅದರ ಶಾಲೆಯ ವರ್ಗಕೋಣೆಯಲ್ಲಿ ರೂಪಿಸಗೊಳ್ಳುತ್ತದೆ."** ಭಾವಿ ನಾಗರೀಕರನ್ನುತಯಾರಿಸುವ ವರ್ಗಕೋಣೆಗಳನ್ನು ಅತ್ಯಂತ ವೈಜ್ಞಾನಿಕ ರೀತಿಯಲ್ಲಿ, ಶಿಸ್ತುಬದ್ಧವಾಗಿ ಸಂಘಟಿಸಿದಾಗ ಉದ್ದೇಶಿಸಿದ ಗುರಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಮಗುವಿನವಯಕ್ತಿತ್ವದ ವಿಕಸನವು ಸಂಪೂರ್ಣವಾಗಿ ವರ್ಗಕೋಣೆಯನ್ನು ಆಧರಿಸಿದೆ. **ವರ್ಗಕೋಣೆಯ ಭೌತಿಕ ಪರಿಸರವು ವಿದ್ಯಾರ್ಥಿಯ ಎರಡನೆಯ ಶಕ್ಷಕನಾಗಿರುತ್ತಾನೆಂದು ಅಮೇರಿಕಾದ ಶಿಕ್ಷಣ ತಜ್ಞರು ಅಭಿಪ್ರಯ ಪಟ್ಟಿದ್ದಾರೆ.**

ಮಾನವನ ದೇಹವೆಂಬ ಚೌಕಟ್ಟು ಹೃದಯ, ಮಿದುಳು, ಯಕೃತ್ತು, ಕೈ–ಕಾಲು, ಕಣ್ಣು ಮೊದಲಾದ ಅಂಗಗಳಿಂದ ಸುವ್ಯವಸ್ಥಿತವಾಗಿ ರಚಿತವಾದಂತೆ ಸಂಘಟನೆಯು ಒಂದು ವರ್ಗಕೋಣೆಗೆ ಬೇಕಾಗುವ ವಿವಿಧ ಭಾಗಗಳನ್ನು ಸುವ್ಯವಸ್ಥಿತವಾಗಿ ವ್ಯವಸ್ಥೆಗೊಳಿಸುವ ಪ್ರಕ್ರಿಯೆಯಾಗಿದೆ.

### ವರ್ಗಕೋಣೆ ಸಂಘಟನೆಯ ಅರ್ಥ (Class room Organization Meaning)

**"ಶೈಕ್ಷಣಿಕ** ಉದ್ದೇಶಗಳ ಈಡೇರಿಕೆಗಾಗಿ ಮಾನವೀಯ ಮತ್ತು ಭೌತಿಕ ಸಂಪನ್ಮೂಲಗಳನ್ನು ಸುವ್ಯಸ್ಥಿತವಾಗಿ **ಕಲೆ ಹಾಕುವ ಪ್ರಕ್ರಿಯೆಗೆ ವರ್ಗಕೋಣೆಯ ಸಂಘಟನೆ"** ಎಂದು ಕರೆಯುವರು.

- ★ **ಬೋಧನೆ** ಮತ್ತು **ಕಲಿಕೆಗೆ** ಧನಾತ್ಮಕವಾದ ಭೌತಿಕ ಪರಿಸರವನ್ನು ರೂಪಿಸುವ ಪ್ರಕ್ರಿಯೆಗೆ ವರ್ಗಕೋಣೆಯ ಸಂಘಟನೆ ಎಂದು ಕರೆಯುವರು.
- ★ ಬೌದ್ಧಿಕ ಮತ್ತು ಭೌತಿಕ ಸಂಪನ್ಮೂಲಗಳ ಸಂಘಟನೆಯಿಂದ ಕಲಿಕೆಯ ಪ್ರಗತಿಗೆ ಪ್ರೇರಣೆ ನೀಡುವ ಪ್ರಕ್ರಿಯೆಗೆ ವರ್ಗಕೋಣೆಯ ಸಂಘಟನೆ ಎಂದು ಕರೆಯುವರು.
- ★ ವರ್ಗಕೋಣೆಯ ಸಂಘಟನೆಯು ಗುಣಮಟ್ಟದ ವರ್ಗಕೋಣೆಯ ವಿನ್ಯಾಸ ಮತ್ತು ರಚನೆ, ಪೀಠೋಪಕರಣ, ಕಪ್ಪು ಹಲಗೆ, ಗಾಳಿ ಮತ್ತು ಬೆಳಕಿನ ವ್ಯವಸ್ಥೆ ಮುಂತಾದವುಗಳನ್ನು ಶಿಸ್ತುಬದ್ಧವಾಗಿ ಸಂಘಟಿಸುವ ಪ್ರಕ್ರಿಯೆಯಾಗಿದೆ.

## ವರ್ಗಕೋಣೆ ಸಂಘಟನೆಯ ಪ್ರಮುಖ ಸಂಪನ್ಮೂಲಗಳು

**ವರ್ಗಕೋಣೆ ಸಂಘಟನೆ**

- ಮಾನವೀಯ ಸಂಪನ್ಮೂಲಗಳು
  - ಶಿಕ್ಷಕರು
  - ವಿದ್ಯಾರ್ಥಿಗಳು
  - ಪಾಲಕರು / ಸಮುದಾಯ
  - ಇತರೆ ಸಿಬ್ಬಂದಿ ವರ್ಗ
- ಭೌತಿಕ ಸಂಪನ್ಮೂಲಗಳು
  - ಗುಣಮಟ್ಟದ ವರ್ಗಕೋಣೆ
  - ಗುಣಮಟ್ಟದ ಕಪ್ಪು ಹಲಗೆ
  - ಗುಣಮಟ್ಟದ ಪೀಠೋಪಕರಣಗಳು
  - ದೃಕ್ ಶ್ರವಣೋಪಕರಣಗಳು
  - ವಿದ್ಯಾರ್ಥಿ ಕೇಂದ್ರಿತ ವಾತಾವರಣ ನಿರ್ಮಾಣ
  - ಬುಲೆಟಿನ್ ಬೋರ್ಡ್
  - ಸ್ಮಾರ್ಟ್ ಬೋರ್ಡ್

**ವರ್ಗಕೋಣೆಯ ಸಂಘಟನೆಯ ಮಹತ್ವ (Importance Classroom Organization Purpose)**

- ★ ವರ್ಗಕೋಣೆ ಸಂಘಟನೆಯು ಬೋಧನೆಯನ್ನು ಪರಿಣಾಮಕಾರಿಗೊಳಿಸುತ್ತದೆ.
- ★ ವರ್ಗಕೋಣೆಯ ಸುವ್ಯವಸ್ಥಿತ ಸಂಘಟನೆಯು ಧನಾತ್ಮಕ ಕಲಿಕೆಗೆ ಪ್ರೇರಣೆ ನೀಡುತ್ತದೆ.
- ★ ಭೌತಿಕ ಪರಿಸರವು ವಿದ್ಯಾರ್ಥಿಯ ಎರಡನೇಯ ಶಿಕ್ಷಕನಾಗಿದ್ದು, ಕಲಿಕೆಗೆ ಪ್ರಗತಿಗೆ ಸಹಾಯಕವಾಗುವುದರ ಜೊತೆಗೆ ವರ್ತನೆಯ ಸಮಸ್ಯೆಗಳನ್ನು ನಿವಾರಿಸುತ್ತದೆ.
- ★ ವರ್ಗಕೋಣೆ ಸಂಘಟನೆಯು ಉತ್ತಮ ಗಾಳಿ, ಬೆಳಕು ಮತ್ತು ಶಬ್ದ ಮಾಲಿನ್ಯದಿಂದ ಮುಕ್ತಿ ಪಡೆದಾಗ ಮಾತ್ರ ಬೋಧನೆ ಮತ್ತು ಕಲಿಕೆಯು ಅರ್ಥಪೂರ್ಣವಾಗುತ್ತದೆ.
- ★ ವರ್ಗಕೋಣೆಯಲ್ಲಿ ಪೀಠೋಪಕರಣಗಳು ಶಿಸ್ತುಬದ್ಧವಾಗಿ ಸಂಘಟಿಸಲ್ಪಟ್ಟರೆ ವಿದ್ಯಾರ್ಥಿಗಳ ಕಲಿಕೆಗೆ ಸಹಾಯಕಾರಿ ಹಾಗೂ ಪರಿಣಾಮಕಾರಿಯಾಗುತ್ತದೆ.
- ★ ವರ್ಗಕೋಣೆಯ ಶಿಸ್ತುಬದ್ಧವಾದ ಸಂಘಟನೆಯು ವರ್ಗಕೋಣೆಯನ್ನು ಕಲಿಕಾ ಕೇಂದ್ರಗಳಾಗಿ ಪರಿವರ್ತಿಸುತ್ತವೆ.
- ★ ಅಮೇರಿಕಾ ಶಿಕ್ಷಣ ತಜ್ಞರ ಪ್ರಕಾರ ಉತ್ತಮ ಗಾಳಿ ಮತ್ತು ಬೆಳಕು ಹೊಂದಿದ ವರ್ಗಕೋಣೆಯಲ್ಲಿ ವಿದ್ಯಾರ್ಥಿಗಳು ಚಟುವಟಿಕೆಯಿಂದ, ಕ್ರಿಯಾಶೀಲರಾಗಿ ಕಲಿಯುತ್ತಾರೆ.
- ★ ಗುಣಮಟ್ಟದ ವರ್ಗಕೋಣೆಯ ಸಂಘಟನೆಯಿಂದ ವಿದ್ಯಾರ್ಥಿಗಳಲ್ಲಿ ಅಪೇಕ್ಷಿತವಾದ ವರ್ತನೆಗಳನ್ನು ಮತ್ತು ಧನಾತ್ಮಕ ಆಸಕ್ತಿಯನ್ನು ಬೆಳೆಸುತ್ತದೆ.
- ★ ಅಮೇರಿಕಾ ಸಂಶೋಧನಕಾರರ ಪ್ರಕಾರ ವಿದ್ಯಾರ್ಥಿಗಳಿಗೆ ಕೊಡುವ ಪೀಠೋಪಕರಣಗಳ ಸೌಲಭ್ಯವು ಗುಣಮಟ್ಟದಾಗಿದ್ದರೆ ಅವಧಾನವನ್ನು ಹೆಚ್ಚಿಸಬಹುದಾಗಿದೆ.
- ★ ಶಬ್ದ ಮಾಲಿನ್ಯದಿಂದ ವರ್ಗಕೋಣೆಯ ಸಂಘಟನೆಯು ಮುಕ್ತಿ ಹೊಂದಿದರೆ ವಿದ್ಯಾರ್ಥಿಗಳು ತಮ್ಮ ಅವಧಾನವನ್ನು ಹೆಚ್ಚು ಕೇಂದ್ರಿಕರಿಸಬಹುದಾಗಿದೆ.
- ★ ವರ್ಗಕೋಣೆಯಲ್ಲಿ ದೃಕ್ ಶ್ರವಣೊಪಕರಣಗಳನ್ನು ಸಂಘಟಿಸುವುದರಿಂದ ಜ್ಞಾನೇಂದ್ರಿಯಗಳ ಮೂಲಕ ಜ್ಞಾನವನ್ನು ಪಡೆಯುವುದರೊಂದಿಗೆ ಕಲಿಕಾ ಆಸಕ್ತಿಯು ಬೆಳೆದು, ಕಲಿತ ವಿಷಯವು ಬಹಳ ದಿನಗಳವರೆಗೆ ಸ್ಮೃತಿಯಲ್ಲಿ ಉಳಿಯುತ್ತದೆ.
- ★ ಬೌದ್ಧಿಕ ಮತ್ತು ಭೌತಿಕ ಸಂಪನ್ಮೂಲಗಳ ಸಂಘಟನೆಯು ಬೋಧನೆ ಮತ್ತು ಕಲಿಕೆಯ ಮೇಲೆ ಹೆಚ್ಚು ಪರಿಣಾಮವನ್ನು ಬೀರುತ್ತದೆ.
- ★ ಉತ್ತಮ ಗುಣಮಟ್ಟದ ವರ್ಗಕೋಣೆಯ ಸಂಘಟನೆಯು ವಿದ್ಯಾರ್ಥಿ ಕೇಂದ್ರಿಕೃತ ವಾತಾವರಣದ ನಿರ್ಮಾಣಕ್ಕೆ ಸಹಾಯಕವಾಗುತ್ತದೆ.
- ★ ಮಗುವಿನ ಜ್ಞಾನತ್ಮಾಕ ವಿಕಾಸವು ವರ್ಗಕೋಣೆಯ ಸಂಘಟನೆಯನ್ನು ಅವಲಂಭಿಸಿದೆ.
- ★ ಮಗುವಿನ ಸಂಪೂರ್ಣ ವ್ಯಕ್ತಿತ್ವದ ವಿಕಸನವು ವರ್ಗಕೋಣೆಯ ಸಂಘಟನೆಯನ್ನು ಆಧರಿಸಿದೆ.

# ಸ್ಮಾರ್ಟ್ ಕ್ಲಾಸ್‌ರೂಮ್
# (SMART CLASSROOM )

21ನೇ ಶತಮಾನವು ತಂತ್ರಗ್ರಜ್ಞಾನದ ಶತಮಾನವಾಗಿದೆ. ತಂತ್ರಜ್ಞಾನದ ಬಳಕೆಯಿಂದ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಕ್ರಾಂತಿಕಾರಿ ಬದಲಾವಣೆಗೆ ಕಾರಣೀಭೂತವಾದ ಪರಿಕಲ್ಪನೆ **"smart classroom"** ಆಗಿದೆ. ಇದು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಅತ್ಯಂತ ಉಪಯುಕ್ತವಾದ ಸಾಧನವಾಗಿ, ಇಲ್ಲಿ **ಬೋಧನೆ** ಮತ್ತು **ಕಲಿಕೆಯು** ಇಂದ್ರಿಯಾನುಭವದ ಮೂಲಕ ಆಗುವುದರಿಂದ ಕಲಿಕೆಯು ಆಸಕ್ತಿದಾಯಕವು, ಧನಾತ್ಮಕತೆಯಿಂದಲೂ ಕೂಡಿರುತ್ತದೆ. **smart classroom** ಆದುನಿಕ ತಂತ್ರಜ್ಞಾನದ ಮೂಲಕ ಸಂಘಟಿಸಲ್ಪಟ್ಟ ವರ್ಗಕೋಣೆಯಾಗಿದೆ. ಇಲ್ಲಿ ಡಿಜಿಟಲ್ ಸಲಕರಣೆಗಳನ್ನು ಬಳಸಲಾಗುತ್ತದೆ. ಇವುಗಳನ್ನು ಬಳಸಿಕೊಂಡು ಬೋಧಿಸಿದಾಗ ವಿದ್ಯಾರ್ಥಿಗಳಿಗೆ ಪಠ್ಯಕ್ರಮದಲ್ಲಿರುವ ಅಮೂರ್ತ ಪರಿಕಲ್ಪನೆಗಳು ಮೂರ್ತ ಸ್ಥಿತಿಯಲ್ಲಿ ಗೋಚರಿಸುತ್ತವೆ. ಇದರಿಂದ ವಿದ್ಯಾರ್ಥಿಗಳಲ್ಲಿ ಪ್ರಾಕಲ್ಪನಾ ಶಕ್ತಿ, ಅವಧಾನ, ಆಸಕ್ತಿ ಮತ್ತು ಗ್ರಹಿಸುವ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಹೆಚ್ಚಿಸುತ್ತದೆ.

**smart classroom** ಗಳು 21ನೇ ಶತಮಾನದ ಬೋಧನೆ–ಕಲಿಕೆಗೆ ಹೊಸ ಪರಿಭಾಷೆಯನ್ನು ಬರೆದಿವೆ. ಇವುಗಳನ್ನು **ಡಿಜಿಟಲ್ ಕ್ಲಾಸ್‌ರೂಮ್**ಗಳೆಂದು ಕರೆಯುತ್ತೇವೆ. ಇಲ್ಲಿ **ಬ್ಲಾಕ್ ಬೋರ್ಡ್‌ಗಳು ನಿಧಾನವಾಘಿ ಸ್ಮಾರ್ಟ್ ಬೋರ್ಡ್‌ಗಳಾಗಿ ಬದಲಾಗುತ್ತಿವೆ**. ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು **ಬೋಧನೆ–ಕಲಿಕಾ ಪ್ರಕ್ರಿಯೆ** ಸುಲಭಗೊಳಿಸಲು ಪರಿಣಾಮಕಾರಿಗೊಳಿಸಲು ನೂತನ ತಂತ್ರಜ್ಞಾನದ ಮೂಲಗಳಾದ **'ಸ್ಮಾರ್ಟ್ ಬೋರ್ಡ್', 'ಸ್ಮಾರ್ಟ್ ಕ್ಲಾಸ್‌ರೂಮು'**ಗಳನ್ನು ನಿರ್ಮಿಸುತ್ತಿವೆ. ಯಾವ ವಿದ್ಯಾರ್ಥಿಗಳು ಸಾಮಾನ್ಯ ತರಗತಿಯಲ್ಲಿ ಶಿಕ್ಷಕನ ಬೋಧನೆಯ ಮೂಲಕ ವಿಷಯವನ್ನು ಗ್ರಹಿಸುವುದು ಕಷ್ಟದಾಯಕವಾಗಿತ್ತು, ಆದರೆ ಸ್ಮಾರ್ಟ್‌ಕ್ಲಾಸ್‌ರೂಮುಗಳ ಮೂಲಕ ಸುಲಭವಾಗಿ ವಿಷಯವನ್ನು ಅರಿಯಬಹುದಾಗಿದೆ. ಉದಾಹರಣೆಗೆ ಸಾಮಾನ್ಯ ತರಗತಿಗಳಲ್ಲಿ ಒಬ್ಬ ಶಿಕ್ಷಕನ ಬೋಧನೆಯಿಂದ ತಿಳಿದ ವಿಷಯ ವಿದ್ಯಾರ್ಥಿಗಳ ಸ್ಮೃತಯಲ್ಲಿ ಬಹಳ ದಿನಗಳವರೆಗೆ ಉಳಿಯುವುದಿಲ್ಲ, ಆದರೆ **ಚಿತ್ರಮಂದಿರ**ಗಳಲ್ಲಿ ನೋಡಿದ ಚಲನಚಿತ್ರಗಳ ಕಥೆಯು ಬಹಳ ದಿನಗಳವರೆಗೆ ನೆನಪಿನಲ್ಲಿ ಉಳಿಯುತ್ತದೆ. ಏಕೆಂದರೆ ದೃಕ್ ಶ್ರವಣಗಳ ಮೂಲಕ ಇಂದ್ರಿಯಾನುಭವದಿಂದ ಪಡೆದ ಜ್ಞಾನವು ಬಹಳ ದಿನಗಳವರೆಗೆ ನೆನಪಿನಲ್ಲಿರುತ್ತದೆ. ಆದ್ದರಿಂದ ಸ್ಮಾರ್ಟ್ ಕ್ಲಾಸ್‌ರೂಮುಗಳ ಬೋಧನೆ ಕಲಿಕೆಗೆ ಹೆಚ್ಚು ಲಾಭದಾಯಕವಾಗಿದೆ.

**ಸ್ಮಾರ್ಟ್ ಕ್ಲಾಸ್‌ರೂಮು**ಗಳಲ್ಲಿ ಬೋಧನೆಯು **ವಾಸ್ತವಿಕ ಜ್ಞಾನವನ್ನು** ನೀಡುತ್ತದೆ. ಉದಾಹರಣೆಗೆ ಸಹರಾ ಮರುಭೂಮಿ ಮತ್ತು ಮೆಡಿಟರನಿಯನ್ ಪ್ರದೇಶದ ಭೌಗೋಳಿಕ ಲಕ್ಷಣಗಳು ಎಂಬ ಘಟಕಗಳಿಗೆ ಸಂಬಂಧಿಸಿದ ಮಾಹಿತಿಯನ್ನು ವಿಡಿಯೋ ಚಿತ್ರಣಗಳ ಮೂಲಕ ವಿವರಿಸಿದಾಗ ನೈಜವಾದ ವಾಸ್ತವಿಕತೆಯಿಂದ ಕೂಡಿದ ಅನುಭವವನ್ನು ನೀಡುವುದಲ್ಲದೇ ಆಳವಾಗಿ ಯೋಚಿಸುವ ಗುಣವನ್ನು ಬೆಳೆಸುತ್ತದೆ. ಸ್ಮಾರ್ಟ್ ಕ್ಲಾಸ್‌ರೂಮಿನಲ್ಲಿರುವ **'ಡಿಜಿಟಲ್ ಸಲಕರಣೆಗಳ ಮೂಲಕ ಬೋಧಿಸಿದಾಗ ವಾಸ್ತವಿಕ ಪರಿಪಕ್ವವಾದ ಜ್ಞಾನವನ್ನು ನೀಡಲು ಸಾಧ್ಯವಾಗುತ್ತದೆ'**.

**ಸ್ಮಾರ್ಟ್‌ಕ್ಲಾಸ್‌ರೂಮುಗಳ ಮಹತ್ವ (Importance of smart classroom)**

★ ಸ್ಮಾರ್ಟ್ ಕ್ಲಾಸ್‌ರೂಮುಗಳ ಮೂಲಕ ಬೋಧಿಸಿದಾಗ ಶೈಕ್ಷಣಿಕ ಪ್ರವಾಸ ಮತ್ತು ಕ್ಷೇತ್ರ ಪ್ರವಾಸಗಳಿಗೆ ತಗಲುವ ವೆಚ್ಚವನ್ನು ತಡೆಯಬಹುದಾಗಿದೆ.

★ ಸ್ಮಾರ್ಟ್–ಬೋರ್ಡ್‌ಗಳ ಮೂಲಕ ಬೋಧನೆಯನ್ನು ಮಾಡುವಾಗ ಪ್ರಮುಖ ಅಂಸಗಳನ್ನು ಮಾರ್ಕರ್ ಮೂಲಕ ಗುರುತಿಸುವುದರಿಂದ ವಿದ್ಯಾರ್ಥಿಗಳ ಅವಧಾನವನ್ನು ಪ್ರಮುಖ ಪರಿಕಲ್ಪನೆಗಳ ಕಡೆಗೆ ಕೇಂದ್ರಿಕರಿಸಬಹುದು. ಇದು ಕಲಿಕೆಗೆ ಹೆಚ್ಚು ಉಪಯುಕ್ತವಾಗಿದೆ.

★ ಸ್ಮಾರ್ಟ್–ಬೋರ್ಡ್‌ಗಳ ಬಳಕೆಯಿಂದ ಸೀಮೆ–ಸುಣ್ಣದ ಧೂಳಿನಿಂದ ಮುಕ್ತಿ ಪಡೆಯಬಹುದಾಗಿದೆ. ಇದು ಶಿಕ್ಷಕ ವಿದ್ಯಾರ್ಥಿಗಳಿಗೂ ಅನುಕೂಲಕರವಾಗಿದೆ.

★ ಸ್ಮಾರ್ಟ್–ಕ್ಲಾಸ್‌ರೂಮುಗಳಲ್ಲಿ ವಿದ್ಯಾರ್ಥಿಗಳು ಚಟುವಟಿಕೆಯಿಂದ ಕ್ರಿಯಾಶೀಲರಾಗಿ ಕಲಿಕಾ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ.

★ ಸ್ಮಾರ್ಟ್–ಕ್ಲಾಸ್‌ರೂಮ್‌ನಿಂದ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ಸಂಗ್ರಹಿಸಲು ಶಕ್ತಿಯುತ ಪುನರ್ಬಲವನ್ನು ನೀಡುತ್ತದೆ.

★ ಸ್ಮಾರ್ಟ್–ಕ್ಲಾಸ್‌ರೂಮುಗಳ ಬಳಕೆಯಿಂದ ಶಿಕ್ಷಕನ ಬೋಧನಾ ಸಮಸ್ಯೆಗಳನ್ನು ನಿವಾರಿಸಿ, ಪಠ್ಯಕ್ರಮದ ಅಮೂರ್ತವಾದ ಪರಿಕಲ್ಪನೆಗಳನ್ನು ಮೂರ್ತಗೊಳಿಸುತ್ತದೆ.

★ ಹಳೆಯ ಸಂಪ್ರದಾಯಬದ್ಧ ವರ್ಗಕೋಣೆಯಿಂದ ವೇಳೆಯ ಅಪವ್ಯಯವನ್ನು ಕಡಿಮೆ ಮಾಡುತ್ತದೆ. ಹಾಗೂ ಸ್ಮಾರ್ಟ್–ಬೋರ್ಡ್‌ಗಳ ಮೂಲಕ ಬೋಧಿಸಿದರೆ ವೇಳೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಬಹುದಾಗಿದೆ.

★ ಸ್ಮಾರ್ಟ್‌ಕ್ಲಾಸ್‌ರೂಮು ಮತ್ತು ಸ್ಮಾರ್ಟ್‌ಬೋರ್ಡ್‌ಗಳನ್ನು ಬೋಧನೆಯಲ್ಲಿ ಬಳಸುವುದರಿಂದ ಇಂದ್ರೀಯಾನುಭವ ಉಂಟಾಗುವುದರಿಂದ ಕಲಿಕೆಯು ಧನಾತ್ಮಕವಾಗುವುದಲ್ಲದೆ ಹೆಚ್ಚು ಅರ್ಥಪೂರ್ಣವಾಗುತ್ತದೆ.

★ ಸ್ಮಾರ್ಟ್–ಕ್ಲಾಸ್‌ರೂಮುಗಳಲ್ಲಿ ಡಿಜಿಟಲ್ ಗ್ರಂಥಾಲಯಗಳ ಸೌಲಭ್ಯಗಳಿರುವುದರಿಂದ ಬೋಧನೆಗನುಗುಣವಾಗಿ ಗ್ರಂಥಾಲಯವನ್ನು ಬಳಸಿಕೊಳ್ಳಬಹುದಾಗಿದೆ.

★ ಸ್ಮಾರ್ಟ್ ಕ್ಲಾಸ್‌ಗಳು ವಿಷಯಗಳ ವಿವರಣೆಯನ್ನು ವಿಡಿಯೋಗಳ ಮೂಲಕ ಪ್ರದರ್ಶಿಸುವುದರಿಂದ ವಿದ್ಯಾರ್ಥಿಗಳಲ್ಲಿ ದೃಕ್–ಶ್ರವಣಗಳೊಂದಿಗೆ ಪಡೆದ ಜ್ಞಾನವು ಶಾಶ್ವತವಾಗಿರುತ್ತದೆ.

★ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ಹೆಚ್ಚಿಸಲುಇ ಅತ್ಯಂತ ಸರಳವಾದ, ಪ್ರಾಯೋಗಿಕವಾದ ಅರ್ಥಪೂರ್ಣವಾದ ತಂತ್ರಜ್ಞಾನವು ಸ್ಮಾರ್ಟ್‌ಕ್ಲಾಸ್‌ನಲ್ಲಿ ದೊರೆಯುತ್ತದೆ.

★ ಸ್ಮಾರ್ಟ್‌ಕ್ಲಾಸ್ ರೂಮಿನಲ್ಲಿ ಮಾಹಿತಿ ತಂತ್ರಜ್ಞಾನವನ್ನು ಬೋಧನೆಯಲ್ಲಿ ಪರಿಣಾಂಕಾರಿಯಾಗಿ ಬಳಸಿಕೊಳ್ಳಬಹುದಾಗಿದೆ.

**ಸ್ಮಾರ್ಟ್ ಕ್ಲಾಸ್‌ರೂಮಿನ ಕಾರ್ಯಗಳು (smart classroom Function) :**

ಬ್ಲಾಕ್‌ಬೋರ್ಡ್‌ಗಳು ವೈಟ್ ಬೋರ್ಡ್‌ಗಳಾಗಿ ಬದಲಾಗಿವೆ. ಇದರಿಂದ ವರ್ಗಕೋಣೆಯು ಚಲನಶೀಲ, ಕ್ರಿಯಾತ್ಮಕವಾಗಿ ಪರಿವರ್ತಿತವಾಗಿವೆ. ಇವುಗಳು ವಿದ್ಯಾರ್ಥಿಗಳಲ್ಲಿ ಮೌಲ್ಯಯುತ ಸಂವಹನಕ್ಕೆ ವೇದಿಕೆಯನ್ನು ಸಿದ್ಧಪಡಿಸುತ್ತವೆ. ಹೊಸ ತಂತ್ರಜ್ಞಾನದ ಮೂಲಕ ಪ್ರೊಜೆಕ್ಟರ್‌ಗಳ ವಿನ್ಯಾಸಗಳನ್ನು ತಯಾರಿಸಲಾಗಿ ಇವುಗಳ ಮೂಲಕ ಚಿಕ್ಕದಾದ ಸ್ಥಳದಲ್ಲಿ ದೊಡ್ಡ ದೃಶ್ಯಗಳ ಮೂಲಕ ಬೋಧಿಸಬಹುದಾಗಿದೆ. ಇದರಿಂದ ವಾಸ್ತವಿಕ ನೈಜವಾದ ಪರಿಕಲ್ಪನೆಗಳನ್ನು ತಿಳಿಸಿಕೊಡಬಹುದಾಗಿದೆ. ಶಿಕ್ಷಣಕ್ಕೆ ಸಂಬಂಧಿಸಿದ ಸಾಫ್ಟ್‌ವೇರ್‌ಗಳನ್ನು ತಯಾರಿಸಿ ವಿಡಿಯೋಗಳನ್ನು, ಗ್ರಾಫಿಕ್ಸ್‌ಗಳನ್ನು ದೃಷ್ಟಾಂತಗಳನ್ನು, ಇಮೇಜ್‌ಗಳನ್ನು ತಯಾರಿಸಿ ಪಠ್ಯಕ್ರಮದ ಅಮೂರ್ತ ಪರಿಕಲ್ಪನೆಗಳನ್ನು ಮೂರ್ತಗೊಳಿಸಲು ಸಹಾಯಕವಾಗುತ್ತದೆ. ಇದರಿಂದ ಕಲಿಕೆಯು ವಿದ್ಯಾರ್ಥಿಗಳಲ್ಲಿ ಆಸಕ್ತಿ ಮತ್ತು ಕುತೂಹಲವನ್ನುಂಟು ಮಾಡುತ್ತದೆ.

**SMART** ಎಂಬ ಪದವನ್ನು ಐದು ದೃಷ್ಟಿಕೋನದಲ್ಲಿ ಸ್ಮಾರ್ಟ್‌ಕ್ಲಾಸ್‌ರೂಮಿನ ಕಾರ್ಯವನ್ನು ವಿವರಿಸಬಹುದು

**SMART – S(Showing) -** ಪ್ರದರ್ಶಿಸುವುದು **M(Manageble) -** ನಿರ್ವಹಿಸುವುದು

**A(Accessible) -** ಸುಲಭ ಲಭ್ಯತೆ **R(Reality) -** ನೈಜತೆ/ವಾಸ್ತವಿಕತೆ

**T(Testing) -** ಪರೀಕ್ಷಿಸುವಿಕೆ

1. **ಪ್ರದರ್ಶಿಸುವುದು (Showing) :**
   ವಿಡಿಯೋಗಳ ಮೂಲಕ ಮತ್ತು ಅನಿಮೇಷನ್‌ಗಳ ಮೂಲಕ ಪಠ್ಯಕ್ರಮದ ಅಮೂರ್ತ ಪರಿಕಲ್ಪನೆಗಳನ್ನು ಸಹಜವಾಗಿ, ನೈಜ್ಯವಾಗಿ ಪ್ರದರ್ಶಿಸಲು ಸ್ಮಾರ್ಟ್‌ಕ್ಲಾಸ್ ಒಂದು ಸಾಧನವಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ.
2. **ನಿರ್ವಹಿಸುವುದು (Manageble) :**
   ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಾಧನ ಸಂಪನ್ಮೂಲಗಳನ್ನು ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸುವುದು ವರ್ಗಕೋಣೆಯ ನಿರ್ವಹಣೆ, ಸಾಧನ ಸಲಕರಣೆಗಳ ನಿರ್ವಹಣೆ, ಭೌತಿಕ ಪರಿಸರದ ನಿರ್ವಹಣೆ, ವಿದ್ಯುತ್ ಸಲಕರಣೆಗಳ ನಿರ್ವಹಣೆ ಇನ್ನು ಮುಂತಾದವುಗಳನ್ನು ನಿರ್ವಹಿಸುವುದು. ಸ್ಮಾರ್ಟ್‌ಕ್ಲಾಸ್‌ರೂಮಿನ ಕಾರ್ಯವಾಗಿದೆ.
3. **ಸುಲಭ ಲಭ್ಯತೆ (Accessible) :**
   ಸಂಪನ್ಮೂಲಗಳ ಆಯ್ಕೆ, ಬೋಧನೆ ಮತ್ತು ಕಲಿಕೆಗೆ ಪೂರಕ ಸಂಪನ್ಮೂಲಗಳನ್ನು ಒದಗಿಸುವುದು, ವಿಷಯವಸ್ತುವಿನ ಹಂಚಿಕೆ, ಪಠ್ಯಕ್ರಮ, ಪಾಠಯೋಜನೆ, ಬೋಧನಾ ವಿಷಯವಸ್ತು, ಬೋಧನೆಗೆ

ಅವಶ್ಯಕವಾದ ಸಲಕರಣೆಗಳು ಮುಂತಾದವುಗಳನ್ನು ಸ್ಮಾರ್ಟ್‌ಕ್ಲಾಸ್‌ರೂಮಿನ ಮೂಲಕ ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವಂತೆ ಮಾಡುವುದು.

**4. ನೈಜತೆ/ವಾಸ್ತವಿಕತೆ (Reality) :**

ಸ್ಮಾರ್ಟ್ ಕ್ಲಾಸ್‌ರೂಮುಗಳು ವಿದ್ಯಾರ್ಥಿಗಳಿಗೆ ಬೋಧನೆಯು ಪಠ್ಯಕ್ರಮಕ್ಕೆ ಸಂಬಂದಿಸಿದಂತೆ ಅಮೂರ್ತ ಪರಿಕಲ್ಪನೆಗಳನ್ನು ಸಹಜ ಹಾಗೂ ನೈಜವಾಗಿ ಮೂರ್ತಗೊಳಿಸುವುದು. ಇದರಿಂದ ವಿದ್ಯಾರ್ಥಿಗಳಲ್ಲಿ ಪ್ರತಿಯೊಂದು ವಿಷಯದ ನೈಜತೆ ಮತ್ತು ವಾಸ್ತವಿಕತೆಯನ್ನು ಮೂಡಿಸಲು ಸಹಾಯಕವಾಗುತ್ತದೆ. ಇದು ವಿದ್ಯಾರ್ಥಿಗಳ ಕಲಿಕಾ ಪ್ರಗತಿಗೆ ಸಹಾಯಕವಾಗುತ್ತದೆ.

**5. ಪರೀಕ್ಷಿಸುವಿಕೆ (Testing) :**

ಭೌತಿಕ ಪರಿಸರ ಮತ್ತು ಕಲಿಕಾ ವರ್ತನೆಗಳನ್ನು ಸ್ಮಾರ್ಟ್ ಕ್ಲಾಸ್‌ಗಳ ಮೂಲಕ ಪರೀಕ್ಷಿಸಬಹುದಾಗಿದೆ. ಸ್ಮಾರ್ಟ್ ಕ್ಲಾಸ್‌ರೂಮಿನ ಉಪಯುಕ್ತತೆಯನ್ನು ಸಿಂಧುತ್ವವನ್ನು ಹಾಗೂ ಪರಿಣಾಮತ್ವವನ್ನು ಪರೀಕ್ಷಿಸಿ, ಮಾರ್ಗಸೂಚನೆಗಳನ್ನು ನೀಡುವುದು.

★ ಸ್ಮಾರ್ಟ್ ಕ್ಲಾಸ್‌ರೂಮುಗಳು ವಿದ್ಯಾರ್ಥಿಗಳಲ್ಲಿ ಸ್ವಯಂ ಕಲಿಕೆ, ಗುಂಪು ಕಲಿಕೆ ಹಾಗೂ ಪರಸ್ಪರರಲ್ಲಿ ಜ್ಞಾನದ ವಿನಿಮಯ ಮುಂತಾದ ಗುಣಗಳನ್ನು ಬೆಳೆಸಲು ಸಹಾಯಕವಾಗುತ್ತದೆ.

★ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಮಹತ್ವದ ಬದಲಾವಣೆ ತರುವುದು, ಮಾಹಿತಿಗಳ ಸಂಗ್ರಹ, ಡಿಜಿಟಲ್ ವರ್ಗಕೋಣೆಯ ಸಂರಚನೆ, ಮಲ್ಟಿ ಮೀಡಿಯಾ ಬೋಧನೆಯ ತೊಂದರೆಗಳನ್ನು ನಿವಾರಿಸಿ ವಿದ್ಯಾರ್ಥಿಗಳು ಸೃಜನಶೀಲ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಪೂರಕವಾದ ವಾತಾವರಣವನ್ನು ಸ್ಮಾರ್ಟ್‌ಕ್ಲಾಸ್‌ರೂಮುಗಳು ನಿರ್ಮಿಸುತ್ತವೆ.

## ಸಾಂಸ್ಥಿಕ ಯೋಜನೆ
## (INSTITUTIONAL PLANNING)

**"ಯಾವ ಮನುಷ್ಯ ಭವಿಷತ್ತಿನ ಕಾಲದ ಬಗ್ಗೆ ಯೋಚಿಸದೆ ಇದ್ದರೆ ಅವನು ಕಠಿಣ ದಿನಗಳನ್ನು ಎದುರಿಸಬೇಕಾಗುತ್ತದೆ." – ಕನ್‌ಫ಼ಿಸಿಯಸ್**

ಯೋಜನೆಯು ಒಂದು ಚಿಂತನೆಯ ಪ್ರಕ್ರಿಯೆ. ಸಂಘಟಿತ ಮುಂದಾಲೋಚನೆ ಹಾಗೂ ಬುದ್ಧಿವಂತ ಕ್ರಿಯೆಗಾಗಿ, ಅವಶ್ಯವಿರುವ ವಸ್ತುಸ್ಥಿತಿ ಮತ್ತು ಅನುಭವಗಳನ್ನಾಧರಿಸಿದ ದೂರದೃಷ್ಟಿಯಾಗಿದೆ. ಯೋಜನೆ ಮೂಲಕ ರಾಷ್ಟ್ರ, ರಾಜ್ಯ ಒಂದು ಶಿಕ್ಷಣ ಸಂಸ್ಥೆಯು ಸಾರ್ವಂಗೀಣ ಪ್ರಗತಿಯನ್ನು ಸಾದಿಸಬಹುದಾಗಿದೆ. ಯೋಜನೆಯು ಭವಿಷ್ಯತ್ಕಾಲದ ಕಾರ್ಯಚಟುವಟಿಕೆಗೆ ಸಂಬಂಧಿಸಿದ ಪ್ರಕ್ರಿಯೆಯಾಗಿದೆ. ಸಾಂಸ್ಥಿಕ ಯೋಜನೆಯು ಶೈಕ್ಷಣಿಕ ಯೋಜನೆಯ ಒಂದು ಅವಿಭಾಜ್ಯ ಅಂಗವಾಗಿದೆ. ಒಂದು ಸಂಸ್ಥೆಯ ಪ್ರಗತಿ ಮತ್ತು ಬೆಳವಣಿಗೆಯು ಆ ಸಂಸ್ಥೆಯ ಗುಣಾತ್ಮಕವಾದ ಯೋಜನೆಯನ್ನು ಆಧರಿಸಿರುತ್ತದೆ. ಸಂಸ್ಥೆಯ ಸಂಪನ್ಮೂಲಗಳನ್ನು ಕ್ರೂಢೀಕರಿಸಿ, ಅವುಗಳನ್ನು ವೈಜ್ಞಾನಿಕ ರೀತಿಯಲ್ಲಿ ಬಳಸಿಕೊಳ್ಳಲು ಸಹಾಯಕವಾದ ಆಧುನಿಕ ಜಗತ್ತಿನ ಕೊಡುಗೆಯಾಗಿದೆ. ಶಿಕ್ಷಣ ಸಂಸ್ಥೆಯ ಬೇಡಿಕೆಗಳನ್ನು ಮತ್ತು ಅಲ್ಲಿರುವ ಸಮಸ್ಯೆಗಳನ್ನು

ಪರಿಹರಿಸಿ, ಪೂರ್ವಭಾವಿಯಾಗಿ ನಿರ್ಧರಿಸಲ್ಪಟ್ಟ ಗುರಿ ಮತ್ತುಯ ಉದ್ದೇಶಗಳನ್ನು ಸಾಧಿಸಲು ಸಹಾಯಕವಾಗುವ ಒಂದು ಸಾಧನವಾಗಿದೆ. ಸಾಂಸ್ಥಿಕ ಯೋಜನೆಯು ಕಾರ್ಯ ನಿರ್ವಹಣೆಯಲ್ಲಿ ದಕ್ಷತೆಯನ್ನು ಮತ್ತು ವೇಗವನ್ನು ತರಲು ಸಹಾಯಕವಾಘುವ ಒಂದು ಸಾಧನವಾಗಿದೆ. ಸಾಂಸ್ಥಿಕ ಯೋಜನೆಯು ಪ್ರಗತಿ ಅಥವಾ ಬೆಳವಣಿಗೆಯ ದ್ಯೋತಕವಾಗಿದೆ.

**ಸಾಂಸ್ಥಿಕ ಯೋಜನೆಯ ಅರ್ಥ ಮತ್ತು ವ್ಯಾಖ್ಯಾನಗಳು :**

## (Meaning & Definitions of Institutional Planning)

- ★ **ಪ್ರೊ. ಎಂ.ಬಿ. ಬುಚ್‌ರವರ ಪ್ರಕಾರ,** "ಶಾಲೆಯ ಅಭಿವೃದ್ಧಿ ಹಾಗೂ ಶೈಕ್ಷಣಿಕ ಸುಧಾರಣೆಗಾಗಿ, ಶಾಲೆಯ ಅಗತ್ಯತೆಗಳನ್ನು ಮತ್ತು ಲಭ್ಯವಿರುವ ಹಾಗೂ ಲಭ್ಯವಾಗಬಹುದಾದ ಸಂನ್ಮೂಲಗಳನ್ನು ಆಧರಿಸಿ, ಶಾಲೆಯ ಕಾರ್ಯಕ್ರಮಗಳನ್ನು ಮತ್ತು ಕಾರ್ಯ ವಿಧಾನಗಳನ್ನು ಸುಧಾರಿಸಿವುದಕ್ಕಾಗಿ ಸಿದ್ಧಪಡಿಸಿದ ಕಾರ್ಯ ಸಮೂಹವೇ ಸಾಂಸ್ಥಿಕ ಯೋಜನೆ ಆಗಿದೆ."
- ★ **ಇ.ಡಬ್ಲ್ಯು.ಪ್ರಾಂಕ್ಲಿನ್‌ರವರ ಅಭಿಪ್ರಾಯದಲ್ಲಿ** "ಸಾಂಶ್ಥಿಕ ಯೋಜನೆಯು ಶಿಕ್ಷಣದ ಪ್ರಗತಿಯ ದಾರಿಯಲ್ಲಿರುವ ಮೈಲುಗಲ್ಲು."
- ★ **ಆರ್.ವಿ.ರಾವ್‌ರವರ ದೃಷ್ಟಿಕೋನದಲ್ಲಿ** "ರಾಷ್ಟ್ರೀಯ ಶಿಕ್ಷಣ ನೀತಿಯ ಚೌಕಟ್ಟಿನಲ್ಲಿ ಪ್ರತಿಯೊಂದು ಶಾಲೆ ತನ್ನದೇ ಆದ ಅಭಿವೃದ್ಧಿ ಯೋಜನೆಯನ್ನು ರಚಿಸಿಕೊಳ್ಳಬೇಕು."
- ★ **ಕೊಠಾರಿ ಶಿಕ್ಷಣ ಆಯೋಗ (1964–66) ದ ಪ್ರಕಾರ** "ಪ್ರತಿಯೊಂದು ಶಾಲೆಯೂ ತನ್ನದೇ ಆದ ಒಂದು ಸಾಂಸ್ಥಿಕ ಯೋಜನೆಯನ್ನು ಸಿದ್ದಪಡಿಸಿಕೊಳ್ಳಬೇಕು."
- ★ **ಸಾಂಸ್ಥಿಕ ಯೋಜನೆ ಎಂದರೆ,** "ಶಾಲೆಯ ಮುಖ್ಯೋಪಧ್ಯಾಯರು, ಶಿಕ್ಷಕರು, ವಿದ್ಯಾರ್ಥಿಗಳು, ತಮ್ಮ ಅವಶ್ಯಕತೆಗಳಿಗನುಗುಣವಾಗಿ ಸಿದ್ಧಪಡಿಸಿದ ಯೋಜನೆಯಾಗಿದೆ."
- ★ "ಮಾನವೀಯ ಸಂಪನ್ಮೂಲಗಳನ್ನು ಮತ್ತು ಭೌತಿಕ ಸಂಪನ್ಮೂಲಗಳನ್ನು ಏಕೀಕರಿಸಿ, ಸಂಸ್ಥೆಯ ಇಚ್ಛಿತ ಉದ್ದೇಶಗಳನ್ನು ಈಡೇರಿಒಸಲು ರೂಪಿಸಿದ ಪ್ರಕ್ರಿಯೆಗೆ **ಸಾಂಸ್ಥಿಕ ಯೋಜನೆ** ಎಂದು ಕರೆಯುವರು."

## ಸಾಂಸ್ಥಿಕ ಯೋಜನೆಯ ಉದ್ದೇಶಗಳು (Objectives of Institutional Planning) :

- ★ ಶಿಕ್ಷಕರ ಸೃಜನಾತ್ಮಕ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವುದು.
- ★ ಶಾಲೆಯ ಅಭಿವೃದ್ದಿಗಾಗಿ ದೊರಕುವ ಸಂಪನ್ಮೂಲಗಳನ್ನು ಪರಿಪೂರ್ಣವಾಗಿ ಬಳಸುವುದು.
- ★ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಸಮುದಾಯಗಳ ಕಾರ್ಯಗಳಲ್ಲಿ ಸಹಕಾರ ಉಂಟಾಗುವಂತೆ ಮಾಡುವುದು.
- ★ ಶಾಲೆಯ ವಿನ್ಯಾಸದಲ್ಲಿ ಸುಧಾರಣೆಗಳನ್ನು ತರುವುದು.

★ ಶಾಲೆಯ ಕಾರ್ಯಗಳು, ಕ್ರಿಯೆಗಳು ಸರಿಯಾದ ಮಾರ್ಗದಲ್ಲಿ ಅನುಷ್ಠಾನಗೊಳ್ಳುವಂತೆ ನಿರ್ದೇಶಿಸುವುದು.

★ ಶೈಕ್ಷಣಿಕ ಯೋಜನೆಗಳಿಗೆ ಮೂರ್ತರೂಪ ಮತ್ತು ವಾಸ್ತವಿಕ ರೂಪವನ್ನು ಕೊಡುವುದು.

★ ಶಿಕ್ಷಕರಿಗೆ ಪ್ರಜಾಸತ್ತಾತ್ಮಕ ವಾತಾವರಣವನ್ನು ನಿರ್ಮಿಸುವುದು.

★ ಸಹ–ಪಠ್ಯ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವುದು.

**ಸಾಂಸ್ಥಿಕ ಯೋಜನೆಯ ಅವಶ್ಯಕತೆ/ಮಹತ್ವ**

## (Need and Importance of Institutional Planning)

★ ಸಾಂಸ್ಥಿಕ ಯೋಜನೆಯಿಂದ ಸಂಸ್ಥೆಯ ಇಚ್ಛಿತ ಗುರಿಗಳನ್ನು ಸುಲಭವಾಗಿ ಸಾಧಿಸಬಹುದಾಗಿದೆ.

★ ಸಂಸ್ಥೆಯ ಕಾರ್ಯ ನಿರ್ವಹಣೆಯನ್ನು ಪರೀಕ್ಷಿಸಬಹುದು ಮತ್ತು ಸರಿಯಾಗಿ ನಿಯಂತ್ರಿಸುವುದು.

★ ಭೌತಿಕ ಮತ್ತು ಮಾನವೀಯ ಸಂಪನ್ಮೂಲಗಳ ಅಪವ್ಯಯವನ್ನು ತಡೆಗಟ್ಟಲು ಸಹಾಯಕವಾಗುತ್ತದೆ.

★ ಸಂಸ್ಥೆಯ ತೀವ್ರ ಅಗತ್ಯತೆಗಳನ್ನು, ಬೇಡಿಕೆಗಳನ್ನು ಪೂರೈಸಲು ಅನುಕೂಲಕರವಾಗಿದೆ.

★ ಶಿಕ್ಷಕರ ಕಾರ್ಯದಕ್ಷತೆಯ ಸಾಮರ್ಥ್ಯವನ್ನು ಹೆಚ್ಚಿಸುವುದು.

★ ಶಿಕ್ಷಕರ ಸೃಜನಾತ್ಮಕ ಮನೋಭಾವನೆಯನ್ನು ವೃದ್ಧಿಗೊಳಿಸುವುದು.

★ ಸಾಂಸ್ಥಿಕ ಯೋಜನೆಯು ಕೇಂದ್ರಿಕೃತವಾಗದೆ, ವಿಕೇಂದ್ರಿಕೃತವಾಗುವುದು.

★ ಶಾಲೆಯಲ್ಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಂತೆ ಮಾಡುವುದು.

★ ಸಾಂಸ್ಥಿಕ ಯೋಜನೆ ತಾರ್ಕಿಕವಾಘಿ ಮತ್ತು ಪ್ರಾಯೋಗಿಕವಾಗಿರುವಂತೆ ಮಾಡುವುದು.

★ ಶಿಕ್ಷಕರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಮಾಡುತ್ತದೆ.

★ ಮೌಲ್ಯಯುತವಾದ ಶಿಕ್ಷಣ ಕ್ರಮವನ್ನು ಅಳವಡಿಸಿಕೊಳ್ಳುವಂತೆ ಮಡುತ್ತದೆ.

★ ಶಾಲೆಯಲ್ಲಿ ದೊರಕುವ ಹಾಗೂ ಸಮುದಾಯದಿಂದ ಒದಗುವ ಸಂಪನ್ಮೂಲಗಳನ್ನು ಗರಿಷ್ಠ ಮಿತಿಯಲ್ಲಿ ಬಳಸಿಕೊಳ್ಳುವುದು.

★ ಶಾಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ರೂಪಿಸುವುದು.

★ ಶಾಲೆಯ ಅಗತ್ಯತೆಗಳನ್ನು ಈಡೇರಿಸಿಕೊಳ್ಳಲು ಸಾಂಸ್ಥಿಕ ಯೋಜನೆಯು ಬೇಕಾಗುವುದು.

★ ಸೂಕ್ತವಾದ ಬೋಧಾನ ವಿಧಾನಗಳನ್ನು ಬಳಸಿಕೊಳ್ಳುವಲ್ಲಿ ಮತ್ತು ಶಾಲಾ ಕಾರ್ಯಕ್ರಮಗಳಲ್ಲಿ ನಿರಂತರತೆ, ಗುಣಾತ್ಮಕತೆಯನ್ನು ಕಾಪಾಡಿಕೊಳ್ಳುವಲ್ಲಿ ಯೋಜನೆಯು ಪ್ರಮುಖ ಪಾತ್ರವಹಿಸುತ್ತದೆ.

**ಸಾಂಸ್ಥಿಕ ಯೋಜನೆಯ ಹಂತಗಳು ಮತ್ತು ಕಾರ್ಯವಿಧಾನ :**

## (Institutional Planning Steps and Procedure)

1. **ಶಾಲಾ ಅಗತ್ಯತೆಗಳ ಸಮೀಕ್ಷೆ (Survey the needs of the school)**
   ಶಾಲೆಯು ಅಗತ್ಯತೆಗಳೇನು? ಎಂಬುದನ್ನು ಸಮೀಕ್ಷೆ ಮಾಡುವುದು ಸಾಂಸ್ಥಿಕ ಯೋಜನೆಯ ಕಾರ್ಯಾರಂಭದ ಮೊದಲ ಹಂತವಾಗಿದೆ. ಈ ಹಂತದಲ್ಲಿ ಶಾಲಾ ಮುಖ್ಯಾಧ್ಯಾಪಕನು ಇತರ ಶಾಲಾ ಪ್ರಮುಖರ ಜೊತೆಗೂಡಿ ಶಾಲೆಯ ಸೌಲಭ್ಯಗಳನ್ನು ಗುರುತಿಸುವುದರ ಜೊತೆ ಜೊತೆಗೆ ಶಾಲೆಯು ಎದುರಿಸುತ್ತಿರುವಂತಹ ವಾಸ್ತವಿಕ ಸಮಸ್ಯೆಗಳೇನು? ಎಂಬುದನ್ನು ಸ್ಪಷ್ಟವಾಗಿ ಗುರುತಿಸಬಕು. ಅಲ್ಲದೇ ಸಾಧ್ಯವಿದ್ದಷ್ಟು ಆ ಸಮೀಕ್ಷೆಯಲ್ಲಿ ವಸ್ತುನಿಷ್ಟತೆಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸಬೇಕು. ಮತ್ತು ಶಾಲೆಯ ಅಗತ್ಯತೆಗಳಲ್ಲಿ ಯಾವ ಅಗತ್ಯತೆಗಳಿಗೆ ಪ್ರಥಮ ಪ್ರಾಶಸ್ತ್ಯ ಹಾಗೂ ಯಾವ ಅಗತ್ಯತೆಗಳಿಗೆ ನಂತರದ ಪ್ರಾಶಸ್ತ್ಯವನ್ನು ಕೊಡಬೇಕೆಂಬುದರ ಬಗ್ಗೆ ಮುಕ್ತ ಚರ್ಚೆ ಹಾಗೂ ತೀರ್ಮಾನವನ್ನು ಕೈಗೊಳ್ಳಬೇಕು. ನಂತರ ಅಗತ್ಯತೆಗಳ ಪ್ರಾಶಸ್ತ್ಯಗಳಿಗನುಸಾರವಾಗಿ ಒಂದು ಸಮಗ್ರ ಯೋಜನೆಗೆ ಕೈ ಹಾಕಬೇಕು.

2. **ಸಂಪನ್ಮೂಲಗಳ ಪರಿಶೀಲನೆ (Estimate the Resources) :**
   ಶಾಲಾ ಅಗತ್ಯತೆಗಳನ್ನು ಸಮೀಕ್ಷೆ ಮಾಡಿದ ಮಲೆ ಅವುಗಳ ಸೂಕ್ತ ಹಾಗೂ ಸಕಾಲಿಕ ಪೂರೈಕೆಗೆ ಲಭ್ಯವಿರುವಂತಹ ಅಥವಾ ಲಭ್ಯವಾಗಬಹುದಾದ ಸಂಪನ್ಮೂಲಗಳ ಕುರಿತಾದ ಯೋಜನೆಯು ಈ ಹಂತದಲ್ಲಿ ಬರುತ್ತದೆ. ಈ ಹಂತದಲ್ಲಿ ಶಾಲಾ ಮುಖ್ಯಸ್ಥರು ಸಹಿತ ಸಕಲ ಶಾಲಾ ಸಿಬ್ಬಂದಿ ವರ್ಗದವರು ಲಭ್ಯವಿರುವ ಹಾಗೂ ಲಭ್ಯವಾಗಬಹುದಾದ ಸಂಪನ್ಮೂಲಗಳ ಪರಿಶೀಲನೆಗೆ ಮುಂದಾಗುತ್ತಾರೆ.

3. **ಯೋಜನೆಯ ಸಿದ್ಧತೆ (Preparing the plan)**
   ಸಂಪನ್ಮೂಲಗಳ ಪರಿಶೀಲನೆಯ ನಂತರದ ಹಂತವೇ ಯೋಜನೆಯ ಸಿದ್ಧತೆ/ಯೋಜನೆಯು ತಯಾರಿಕೆಯಾಗಿದೆ. ಸಾಮಾನ್ಯವಾಗಿ ಈ ಹಂತದಲ್ಲಿ ಶಾಲೆಯಲ್ಲಿನ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಸವಿವರವಾದ ಯೋಜನೆಯೊಂದನ್ನು ಸಿದ್ಧಪಡಿಸಬೇಕಾಗುತ್ತದೆ. ಅದಕ್ಕೋಸ್ಕರ ಶಾಲೆಯಲ್ಲಿನ ವಿದ್ಯಾರ್ಥಿಗಳ ಜೊತೆಗೆ, ಶಿಕ್ಷಕರ, ಶಿಕ್ಷಣಾಧಿಕಾರಿಗಳೊಂದಿಗೆ ಸೂಕ್ತ ಚಿಂತನೆ–ಮಂಥನ ಮಾಡಬೇಕಾಗುತ್ತದೆ. ಅಲ್ಲದೆ ಸಮಾಜದ ಅವಿಭಾಜ್ಯ ಅಂಗದಂತಿರುವ ಪಾಲಕರು/ಪೋಷಕರೊಂದಿಗೆ ಚರ್ಚಿಸಿದ. ನಂತರ ಸಂಸ್ಥೆಯ ಯೋಜನೆಯನ್ನು ರಚಿಸುವುದರಿಂದ ಅರ್ಥಪೂರ್ಣವಾಗಿರುತ್ತದೆ.

4. **ಯೋಜನೆಯ ಅನುಷ್ಠಾನ (Execution of the plan) :**
   ಯೋಜನೆಯ ಕಾರ್ಯಗತ ಹಂತ ಇದಾಗಿದ್ದು, ಈ ಹಂತದಲ್ಲಿ ಮುಖ್ಯಾಧ್ಯಾಪಕನು ಯೋಜನೆಯ ಅನುಷ್ಠಾನದ ಸಂಪೂರ್ಣ ಹೊಣೆಗಾರ/ರೂವಾರಿಯಾಗಿರುತ್ತಾನೆ. ಆದ್ದರಿಂದ ಮುಖ್ಯೋಪಾಧ್ಯಾಯ ನು ಸಿಬ್ಬಂದಿಯ ಸಹಕಾರದೊಂದಿಗೆ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದು ಯಶಸ್ವಿಗೊಳಿಸುವುದು ಗುರಿಯನ್ನು ತಲುಪುವುದಾಗಿದೆ.

5. **ಯೋಜನೆಯ ಮೌಲ್ಯಮಾಪನ (Evaluating the plan) :**

ಯೋಜನೆಯು ಎಷ್ಟರಮಟ್ಟಿಗೆ ಸಫಲವಾಗಿದೆ ಎಂಬುದನ್ನು ತಿಳಿಯುವ ಅಂತಿಮ ಹಂತವೇ ಮೌಲ್ಯಮಾಪನವಾಗಿದೆ. ಮೌಲ್ಯಮಾಪನವನ್ನು ಮಾಡುವುದರಿಂದ ಕೆಲವೊಂದು ದೋಷಗಳನ್ನು ಗುರುತಿಸಿ ಮುಂದಿನ ಹಂತಗಳಲ್ಲಿ ದೋಷ ಮುಕ್ತಗೊಳಿಸಲು ಸಹಾಯಕವಾಗುವುದು. ಅರ್ಥಪೂರ್ಣವಾದ ಹಂತವಾಗಿದೆ. ಉತ್ತಮ ಮೌಲ್ಯಮಾಪನವು ಮುಂದಿನ ಸಾಂಸ್ಥಿಕ ಯೋಜನೆಯ ಯಶಸ್ಸಿನ ಮೆಟ್ಟಿಲಾಗುವುದರಲ್ಲಿ ಯಾವುದೇ ಸಂದೇಹಗಳಿಲ್ಲ.

**ಸಾಂಸ್ಥಿಕ ಯೋಜನೆಯಲ್ಲಿ ಶಿಕ್ಷಕನ ಪಾತ್ರ (Role of the teacher in institutional planning)**

"Teacher is a achiever of success" ಎನ್ನುವಂತೆ ಶಾಲಾ ಯಶಸ್ಸಿಗೆ ಮತ್ತರು ಸಾಂಸ್ಥಿಕ ಯೋಜನೆಯ ಯಶಸ್ಸಿಗೆ ಶಿಕ್ಷಕನು ಆಧಾರ ಸ್ಥಂಭನಾಗಿದ್ದಾನೆ. ಕೇವಲ ಮುಖ್ಯೋಪಾಧ್ಯಾಯನಿಂದಲೇ ಸಾಂಸ್ಥಿಕ ಯೋಜನೆಯ ಸಕಲ ಕಾರ್ಯಗಳು ನೆರವೇರಲು ಸಾಧ್ಯವಿಲ್ಲ. ಆದ ಕಾರಣ ಸಾಂಸ್ಥಿಕ ಯೋಜನೆಯ ಆರಂಭದಿಂದ ಹಿಡಿದು ಅಂತ್ಯದವರೆಗೂ ಶಿಕ್ಷಕರ ಸಕ್ರಿಯ ಪಾಲ್ಗೊಳ್ಳುವಿಕೆ, ಸಹಕಾರ ಹಾಗೂ ಶ್ರಮದ ಅವಶ್ಯಕತೆ ಇರುತ್ತದೆ.

★ ಶಾಲೆಗೆ ಅಗತ್ಯವಾಗಬಹುದಾದ ಸಂಪನ್ಮೂಲಗಳನ್ನು ಗುರುತಿಸುವ ಜವಾಬ್ದಾರಿಯು ಶಿಕ್ಷಕನದ್ದಾಗಿದೆ.

★ ಶಿಕ್ಷಕನು ಸಕ್ರಿಯವಾಗಿ ಪಾಲ್ಗೊಳ್ಳುವುದರ ಮೂಲಕ ಮುಖ್ಯೋಪಾಧ್ಯಾಯನ ಕಾರ್ಯಭಾರವನ್ನು ಕಡಿಮೆಗೊಳಿಸಲು ಸಹಾಯ ಮಾಡುವನು.

★ ಶಿಕ್ಷಣದ ಪ್ರಗತಿಗೆ ಪೂರಕವಾಗಿ ನಿಲ್ಲುವುದಕ್ಕಾಗಿ ಶಿಕ್ಷಕರ ಪಾಲ್ಗೊಳುವಿಕೆ ಅನಿವಾರ್ಯ

★ ಜವಾಬ್ದಾರಿಯನ್ನು ಸರಿಸಮಾನವಾಗಿ ಹಂಚಿಕೊಳ್ಳುವುದು ಶಿಕ್ಷಕರ ಆದ್ಯ ಕರ್ತವ್ಯವಾಗಿದೆ.

★ ಅಭಿವೃದ್ಧಿ ಕಾರ್ಯಗಳ ಯೋಜನೆ ರೂಪಿಸಲು ಶಿಕ್ಷಕ ಅವಶ್ಯಕ.

★ ಯೋಜನೆಯನ್ನು ಸಿದ್ಧಪಡಿಸುವಾಗ ಸೂಕ್ತ ಮಾರ್ಪಾಡುಗಳನ್ನು ತರಲು ಶಿಕ್ಷಕ ಬೇಕು.

ಒಟ್ಟಿನಲ್ಲಿ ಶಿಕ್ಷಣದ ಸಮಗ್ರ ಸುಧಾರಣೆಗಾಗಿ ಕೈಗೊಳ್ಳುವಂತಹ ಯಾವುದೇ ಯೋಜನೆಯು ಶಿಕ್ಷಕನಿಲ್ಲದೆ ಪರಿಪೂರ್ಣವಾಗಲಾರವು. ಆದಕಾರಣ ಸಾಂಸ್ಥಿಕ ಯೋಜನೆಯ ಸಫಲತೆಗಾಗಿ ಅತ್ಯುತ್ತಮ ಪ್ರಯತ್ನವನ್ನು ಮಾಡಲು ಶಿಕ್ಷಕನು ಅತ್ಯವಶ್ಯಕ ಮತ್ತು ಅನಿವಾರ್ಯವೆಂದು ಹೇಳಬಹುದು.

## ಶಾಲಾ ವೇಳಾಪತ್ರಿಕೆ ಅಥವಾ ವೇಳಾಪಟ್ಟಿ

**"Well arranged time is the surest mark of a well arranged mind." – Pitman**